ಅಧ್ಯಕ್ಷರು : ಅವರು ಸಭೆಯನ್ನು ಕರೆದು ನಿಮ್ಮ ಅಭಿಪ್ರಾಯವನ್ನು ತೆಗೆದುಕೊಂಡು ಕೆಲಸವನ್ನು ಮಾಡುತ್ತೇವೆಂದು ಹೇಳಿದ್ದಾರಲ್ಲಾ.

ಶ್ರೀ ಯು.ಬಿ. ಬಣಕಾರ್ : ನಾವು ಶಾಸಕರಾದ ಮೇಲೆ ಇದುವರೆಗೂ ಒಂದು ಮೀಟಿಂಗ್ ಕರೆದಿಲ್ಲ. ಮೂರು ತಿಂಗಳು ಆಗುತ್ತಾ ಬಂತು.

ಅಧ್ಯಕ್ಷರು : ಈಗ ಅವರು ಕರೆಯಿಸುತ್ತಾರೆ. ನೀವು ಬೇಗ ಮೀಟಿಂಗ್ ಕರೆಯಿರಿ.

ರಾಜ್ಯದಲ್ಲಿರುವ ಕುಷ್ಠರೋಗ ಸೇವಾ ಕೇಂದ್ರ

301 - ಕೆ. ಜಯರಾಮಶೆಟ್ಟಿ (ಉಳ್ಳಾಲ) : ಮಾನ್ಯ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ರಾಜ್ಯದಲ್ಲಿರುವ ಕುಷ್ಠರೋಗ ಸೇವಾ ಕೇಂದ್ರಗಳ ಸಂಖ್ಯೆ ಎಷ್ಟು?

ಆ) ರಾಜ್ಯದಲ್ಲಿರುವ ಕುಷ್ಠರೋಗಿಗಳ ಸಂಖ್ಯೆ ಎಷ್ಟು?

ಇ) ದಕ್ಷಿಣಕನ್ನಡ ಜಿಲ್ಲೆಯಲ್ಲಿರುವ ಕುಷ್ಠರೋಗಿಗಳ ಸಂಖ್ಯೆ ಎಷ್ಟು?

ಈ) ಸರ್ಕಾರವು ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಇರುವ ಕುಷ್ಠರೋಗ ಸೇವಾ ಕೇಂದ್ರಗಳಿಗೆ ಎಷ್ಟು ಧನಸಹಾಯ ನೀಡಿದೆ?

ಉ) ಕುಷ್ಠ ಮುಕ್ತರಿಗೆ ಸರ್ಕಾರಿ ನೌಕರರಾಗಿ ಉದ್ಯೋಗ ಒದಗಿಸುವ ಕಾರ್ಯಕ್ರಮ ಸರ್ಕಾರದವರು ಹಮ್ಮಿಕೊಂಡಿರುವರೇ?

ಶ್ರೀ ಹೆಚ್.ಸಿ. ಮಹದೇವಪ್ಪ (ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರು):

ಅ) ರಾಜ್ಯದಲ್ಲಿ ಒಟ್ಟು 820 ಕುಷ್ಠರೋಗ ಸೇವಾ ಕೇಂದ್ರಗಳಿವೆ.

ಆ) ರಾಜ್ಯದಲ್ಲಿ 23047 ಕುಷ್ಠರೋಗಿಗಳನ್ನು 31-1-95 ರವರೆಗೆ ನೋಂದಾಯಿಸಿ ಚಿಕಿತ್ಸೆ ಪಡೆಯುತ್ತಿದ್ದಾರೆ.

ಇ) ದಕ್ಷಿಣ ಕನ್ನಡ ಜಿಲ್ಲೆಯಲ್ಲಿ 874 ಕುಷ್ಠರೋಗಿಗಳನ್ನು 31-1-95ರವರೆಗೆ ನೊಂದಾಯಿಸಿ ಚಿಕಿತ್ಸೆ ಪಡೆಯುತ್ತಿದ್ದಾರೆ.

ಉ) 41.59 ಲಕ್ಷ ರೂ.ಗಳು

ಊ) ಹೌದು.

ಶ್ರೀ ಕೆ. ಜಯರಾಮ ಶೆಟ್ಟಿ : ಮಾನ್ಯ ಅಧ್ಯಕ್ಷರೇ, 1983ನೇ ಇಸವಿಯಲ್ಲಿ ಸರ್ಕಾರದ ಪ್ರಕಟಣೆಯ ಪ್ರಕಾರ ರಾಜ್ಯದಲ್ಲಿ 26 ಸಾವಿರ ಕುಷ್ಠರೋಗಿಗಳ ಸಂಖ್ಯೆ ಇದೆ ಎಂದು ದಾಖಲಾಗಿದೆ. ಆದರೆ 11 ವರ್ಷಗಳು ಕಳೆದ ನಂತರ ಆಧುನಿಕ ರೀತಿಯಲ್ಲಿ ಕುಷ್ಠರೋಗಿಗಳ ನೋಂದಾವಣೆ ಸಂಖ್ಯೆ ಹೆಚ್ಚಾಗಿರಬೇಕು. 1983ರಲ್ಲಿ ಕೈ ಬೆರಳು, ಕಾಲು ಬೆರಳುಗಳು ಮಡಿಸಿದ ನಂತರ ಜನರು ಕೇಂದ್ರಕ್ಕೆ ಹೋಗಿ ನೋಂದಾವಣೆ ಮಾಡಿಸುವಂತಹ ಅಭ್ಯಾಸವಿತ್ತು. ಈಗ ಹಾಗೆ ಇಲ್ಲ. ಆದುದರಿಂದ ಸರ್ಕಾರ ಲೆಕ್ಕಾಚಾರ ತಪ್ಪು ಎಂದು ನನ್ನ ಅಭಿಪ್ರಾಯ. ದಕ್ಷಿಣ ಕನ್ನಡ ಜಿಲ್ಲೆಯಲ್ಲಿ 41.59 ಲಕ್ಷ ರೂಪಾಯಿಗಳನ್ನು 874 ರೋಗಿಗಳಿಗೆ ಯಾವ ರೀತಿಯಲ್ಲಿ ಎಷ್ಟು ಸೇವಾ ಕೇಂದ್ರಗಳಿಗೆ ಈ ಹಣವನ್ನು ನೀಡಿದೆ ಎಂಬುದಕ್ಕೆ ಸರ್ಕಾರ ಉತ್ತರ ಕೊಡಬೇಕಾಗುತ್ತದೆ. ಈಗ ಈ ರೋಗದಿಂದ ಮುಕ್ತರಾದಂತಹ ಜನರಿಗೆ ಯಾವ ರೀತಿಯ ಉದ್ಯೋಗವನ್ನು ಕೊಟ್ಟಿದ್ದಾರೆ, ಎಷ್ಟು ಜನರಿಗೆ ಕೊಟ್ಟಿದ್ದಾರೆ. ಕುಷ್ಠರೋಗ ಸೇವಾ ಕೇಂದ್ರಗಳಲ್ಲಿ ಯಾವ ಯಾವ ರೀತಿಯ ಸೇವಾ ಸೌಲಭ್ಯವಿದೆ. ಹಾಗೂ ಪ್ರತಿಯೊಬ್ಬ ಒಳ ರೋಗಿಗೆ

ಮಾಸಿಕ ವೇತನ ಯಾವ್ಯಾವ ರೀತಿಯಲ್ಲಿ ಕೊಡುತ್ತಾರೆ ಎಂಬುದಕ್ಕೆ ಸರ್ಕಾರ ಉತ್ತರ ಕೊಡಬೇಕು.

ಡಾ|| ಹೆಚ್.ಸಿ. ಮಹದೇವಪ್ಪ : ಮಾನ್ಯ ಅಧ್ಯಕ್ಷರೇ, ಕಳೆದ 10 ವರ್ಷಗಳಲ್ಲಿ ಪ್ರತಿ ಸಾವಿರಕ್ಕೆ 10 ಜನ ಕುಷ್ಠರೋಗಿಗಳು ಇರುತ್ತಿದ್ದರು. ಕುಷ್ಠರೋಗವನ್ನು ಒಂದು ರಾಷ್ಟ್ರೀಯ ಕಾರ್ಯಕ್ರಮವಾಗಿ ನಿಯಂತ್ರಣ ಮಾಡುವಂತಹ ಸಂದರ್ಭದಲ್ಲಿ ಕುಷ್ಠರೋಗಿಗಳ ಸಂಖ್ಯೆ ಪ್ರತಿ ಸಾವಿರಕ್ಕೆ 0.35 ಕ್ಕೆ ಇಳಿದಿರುವುದರಿಂದ ಕುಷ್ಠರೋಗಿಗಳ ಸಂಖ್ಯೆ ಗಣನೀಯವಾಗಿ ಕಡಿಮೆಯಾಗಿದೆ. ಇಡೀ ದೇಶದಲ್ಲಿಯೇ ಕರ್ನಾಟಕ ರಾಜ್ಯದಲ್ಲಿ ಕುಷ್ಠರೋಗದಿಂದ ನಿವಾರಣೆಯಾಗಿ ಹೋದಂಥ ಜನರಿಗೆ ಪುನರ್‌ವಸತಿ ಮತ್ತು ಉದ್ಯೋಗ ಗ್ರೂಪ್ 'ಡಿ' ನೌಕರಿಯನ್ನು ಕೊಡುವುದಕ್ಕೆ ಕಾರ್ಯಕ್ರಮವನ್ನು ಹಾಕಿಕೊಂಡಿದ್ದೇವೆ.

ಸುಮಾರು 327 ಜನ ಕುಷ್ಠರೋಗಿಗಳಿಗೆ ಈಗ ನಾವು ಗ್ರೂಪ್-ಡಿಯಲ್ಲಿ ಉದ್ಯೋಗವನ್ನು ಕೊಟ್ಟಿದ್ದೇವೆ. ಅದರಲ್ಲಿ ಕುಷ್ಠರೋಗ ಇಲ್ಲದೆ ಇರತಕ್ಕಂಥವರು ಸುಳ್ಳು ಸರ್ಟಿಫಿಕೇಟ್‌ಗಳನ್ನು ಕೊಟ್ಟು ಈ ಕುಷ್ಠರೋಗಿಗಳ ಸವಲತ್ತನ್ನು ಲಪಟಾಯಿಸುವುದಕ್ಕೆ ಪ್ರಯತ್ನ ಮಾಡತಕ್ಕಂಥ ಸಂದರ್ಭದಲ್ಲಿ ಸಿ.ಓ.ಡಿ.ಯಿಂದ ತನಿಖೆಯನ್ನು ನಡೆಸಿ ಸುಮಾರು ನೂರು ಜನರನ್ನು ನಾವು ಕಂಡು ಹಿಡಿದು ಅವರ ನೇಮಕಾತಿಯನ್ನು ರದ್ದುಮಾಡಿದ್ದೇವೆ. ಅವರ ತನಿಖೆ ನಡೆಯುತ್ತಿದೆ. ಮುಂದೆ ನಿಜವಾದಂಥ ಕುಷ್ಠರೋಗಿಗಳಿಗೆ ಕೆಲಸವನ್ನು ಗ್ರೂಪ್-ಡಿಯಲ್ಲಿ ಕೊಡಲಿಕ್ಕೆ ಸರ್ಕಾರ ಪ್ರಯತ್ನ ಮಾಡುತ್ತದೆ. ಹಾಗೆಯೇ ರಾಜ್ಯದಲ್ಲಿ 31 ರಾಷ್ಟ್ರೀಯ ಕುಷ್ಠರೋಗ ನಿಯಂತ್ರಣ ಕೇಂದ್ರಗಳು 14, ಮಾರ್ಪಡಿತ ಕುಷ್ಠರೋಗ ನಿಯಂತ್ರಣ ಘಟಕಗಳು, 49 ನಗರ ಕುಷ್ಠರೋಗ ಕೇಂದ್ರಗಳಲ್ಲಿ 675 ಸಮೀಕ್ಷೆಯ ಶಿಕ್ಷಣ ಮತ್ತು ಚಿಕಿತ್ಸಾ ಕೇಂದ್ರಗಳು 22 ತಾತ್ಕಾಲಿಕ ಕುಷ್ಠರೋಗ ಹಾಸಿಗೆ ವಾರ್ಡ್ಗಳು, 240 ಹಾಸಿಗೆಗಳುಳ್ಳ ಒಂದು ಕುಷ್ಠರೋಗ ಆಸ್ಪತ್ರೆ, 2 ಕುಷ್ಠರೋಗ ಪುನರ್ವಸತಿ ಹಾಗೂ ಷಡೋನ್ನತಿ ಕೇಂದ್ರಗಳು. ಇದರ ಜೊತೆಗೆ 26 ಸ್ವಯಂ ಸೇವಾ ಸಂಸ್ಥೆಗಳು ಈ ಕಾರ್ಯಕ್ರಮದಲ್ಲಿ ಭಾಗವಹಿಸುತ್ತಿವೆ. ರಾಜ್ಯದಲ್ಲಿ 31-01-95ರವರೆಗೆ ಒಟ್ಟು 23,047 ರಷ್ಟು ಕುಷ್ಠರೋಗಿಗಳ ಸಂಖ್ಯೆ ಇದ್ದು ಬಹಳ ವಿಧದ ಚಿಕಿತ್ಸೆಯನ್ನು ಪಡೆಯುತ್ತಿದ್ದಾರೆ. ದಕ್ಷಿಣ ಕನ್ನಡ ಜಿಲ್ಲೆಯಲ್ಲಿ 31-1-95ರವರೆಗೆ ಒಟ್ಟು ಕುಷ್ಠರೋಗಿಗಳ ಸಂಖ್ಯೆ ಇದ್ದು ಬಹಳ ವಿಧದ ಚಿಕಿತ್ಸೆ ಪಡೆಯುತ್ತಿದ್ದಾರೆ. ಸರ್ಕಾರವು ದಕ್ಷಿಣ ಕನ್ನಡ ಜಿಲ್ಲೆಗೆ 1994-95ರ ಸಾಲಿಗಾಗಿ ಕುಷ್ಠರೋಗ ಸೇವಾ ಕೇಂದ್ರಕ್ಕೆ 40.43 ಲಕ್ಷ ರೂಪಾಯಿಗಳನ್ನು ಬಿಡುಗಡೆ ಮಾಡಲಾಗಿದೆ. ಮತ್ತು ಸ್ವಯಂ ಸೇವಾ ಸಂಸ್ಥೆಗಳಿಗೆ 1.16 ಲಕ್ಷ ಸಹಾಯಧನವನ್ನು ನೀಡಿದೆ. ಕುಷ್ಠರೋಗದಿಂದ ಗುಣ ಹೊಂದಿದವರಿಗೆ ಸರ್ಕಾರಿ ನೌಕರರಾಗಿ ಉದ್ಯೋಗ ಒದಗಿಸುವ ಕಾರ್ಯಕ್ರಮ ಇತ್ತು ಅದರ ಬಗ್ಗೆ ಕ್ರಮ ತೆಗೆದುಕೊಂಡಿದ್ದೇವೆ.

ಶ್ರೀ ಕೆ. ಜಯರಾಮ ಶೆಟ್ಟಿ : ಸನ್ಮಾನ್ಯ ಅಧ್ಯಕ್ಷರೇ, ದಕ್ಷಿಣ ಕನ್ನಡ ಜಿಲ್ಲೆಯಲ್ಲಿನ ಎಷ್ಟು ಕೇಂದ್ರದಲ್ಲಿ ಯಾವ ಯಾವ ತರಹ ಸೌಲಭ್ಯ ಮತ್ತು ಒಬ್ಬೊಬ್ಬ ರೋಗಿಗಳಿಗೆ ಯಾವ ತರಹದಲ್ಲಿ ಸೇವಾ ಸೌಲಭ್ಯವನ್ನು ಕೊಡುತ್ತಾರೆ ಎಂದು ಮಾನ್ಯ ಮಂತ್ರಿಗಳು ಉತ್ತರ ಕೊಡಬೇಕು.

ಶ್ರೀ ಹೆಚ್.ಸಿ. ಮಹದೇವಪ್ಪ : ಮಲ್ಪಿಡೆತ್ ಥೆರಪಿಗೆ ಕೊಡುತ್ತಿದ್ದೇವೆ. ಅದು ಕೊಟ್ಟಮೇಲೆ ಸಾಮಾನ್ಯವಾಗಿ ಗುಣವಾಗುತ್ತಾರೆ.

ಶ್ರೀ ಜಗದೀಶ್ ಪಾಟೀಲ್ : ಮಾನ್ಯ ಮಂತ್ರಿಗಳು ಈಗ ಒಂದು ವಿವರಣೆಯನ್ನು ಏನು ಕೊಟ್ಟರು ಅಂದರೆ ಈ ಸುಳ್ಳು ಸರ್ಟಿಫಿಕೇಟ್ ಕೊಟ್ಟು ಕುಷ್ಠರೋಗಿಗಳ ನೌಕರಿಯನ್ನು ತೆಗೆದುಕೊಳ್ಳಬೇಕೆಂದು ಮಾಡಿದ್ದರು ಅದರ ಬಗ್ಗೆ ಹೇಳಿದರು. ಅದರಲ್ಲಿ

ನಿಜವಾದ ಕುಷ್ಠರೋಗಿಗಳು ಇದ್ದರೂ ಸಹ ಅವರನ್ನು ಕ್ಯಾನ್ಸಲ್ ಮಾಡಿದ್ದುದು ಉಂಟು. ಅವರಿಗೆ ಪರಿಹಾರ ಏನು? ಅವರಿಗೆ ಯಾವ ರೀತಿ ಭರವಸೆ ಕೊಡುತ್ತೀರಿ? ಈಗ ಕುಷ್ಠರೋಗ ಇದ್ದಾಗಲೂ ಸಹ ಸುಳ್ಳು ಸರ್ಟಿಫಿಕೇಟ್ ಎಂದು ತಾವು ಕ್ಯಾನ್ಸಲ್ ಮಾಡಿದ್ದೀರಿ ಅವರಿಗೆ ಮುಂದೆ ಉದ್ಯೋಗದ ಭರವಸೆ ಏನಾದರೂ ಕೊಡಲಿಕ್ಕೆ ಸಾಧ್ಯ ಇದೆಯೇ?

ಡಾ॥ ಹೆಚ್. ಸಿ. ಮಹದೇವಪ್ಪ : ಈಗಾಗಲೇ ಕೊಟ್ಟಿದ್ದೇವೆ.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ : ಸುಳ್ಳು ಸರ್ಟಿಫಿಕೇಟ್ ತೆಗೆದುಕೊಂಡು ಕೆಲವು ಜನ ನೌಕರಿಯನ್ನು ಪಡೆದಿಕೊಂಡಿದ್ದರು. ಅದನ್ನು ಕಂಡುಹಿಡಿದು ಅಂತಹ ಸುಳ್ಳು ಸರ್ಟಿಫಿಕೇಟ್‌ಗಳನ್ನು ತೆಗೆದುಕೊಂಡವರನ್ನು ನೌಕರಿಯಿಂದ ವಜಾ ಮಾಡಿದ್ದೇವೆ ಎಂದು ನೀವು ಹೇಳಿದಿರಿ, ಅವರು ಹೇಳುವುದು ನಿಜವಾದಂಥ ಕೆಲವು ಕುಷ್ಠರೋಗಿಗಳನ್ನು ತಾವು ಇದೇ ಗ್ರೌಂಡ್‌ನಲ್ಲಿ ಅಂದರೆ ಅವರು ಕುಷ್ಠರೋಗಿಗಳು ಅಲ್ಲ ಎಂದು ಹೇಳಿ ತಾವು ತೆಗೆದಿದ್ದೀರಿ ಅದಕ್ಕೆ ಏನು ಮಾಡುತ್ತೀರಿ ಎಂದು ಕೇಳುತ್ತಿದ್ದಾರೆ.

ಡಾ॥ ಹೆಚ್.ಸಿ. ಮಹದೇವಪ್ಪ : ಆ ತರಹದ ಕೇಸ್‌ಗಳು ಇದ್ದರೆ ಪರಿಶೀಲನೆ ಮಾಡುತ್ತೇನೆ.

ಅನುದಾನಿತ ತಾಂತ್ರಿಕ ವಿದ್ಯಾಲಯಗಳಲ್ಲಿ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ವರ್ಗಗಳ ನೇಮಕ

7 - ಶ್ರೀ ಎ.ಹೆಚ್. ಜಯಪ್ರಕಾಶ್ ನಾರಾಯಣ (ಯಲಹಂಕ) : ಮಾನ್ಯ ಉನ್ನತ ಶಿಕ್ಷಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಸರ್ಕಾರದಿಂದ ಅನುದಾನ ಪಡೆಯುತ್ತಿರುವ ತಾಂತ್ರಿಕ ಮಹಾವಿದ್ಯಾಲಯಗಳು ಮತ್ತು ಪಾಲಿಟೆಕ್ನಿಕ್‌ಗಳ ಸಂಖ್ಯೆ ಎಷ್ಟು? ಅವುಗಳಲ್ಲಿ ಪರಿಶಿಷ್ಟ ಜಾತಿ, ಪರಿಶಿಷ್ಟ ವರ್ಗಗಳಿಗೆ ಸೇರಿದ ನೌಕರುಗಳ ಸಂಖ್ಯೆ ಎಷ್ಟು ಮತ್ತು ಶೇಕಡವಾರು ಪ್ರಮಾಣವೆಷ್ಟು?

ಆ) ಅನುದಾನ ಪಡೆಯುತ್ತಿರುವ ಈ ಸಂಸ್ಥೆಗಳಲ್ಲಿರುವ ಒಟ್ಟು ಕೆಲಸ ಮಾಡುತ್ತಿರುವ ನೌಕರರೆಷ್ಟು ಹಾಗೂ ಅವರಲ್ಲಿ ಪರಿಶಿಷ್ಟ ಜಾತಿ ಪರಿಶಿಷ್ಟ ವರ್ಗದವರ ಸಂಖ್ಯೆ ಎಷ್ಟು ಬೋಧಕ ಹಾಗೂ ಬೋಧಕರ ಶೇಕಡವಾರು ಪ್ರತ್ಯೇಕ ಪಟ್ಟಿಯನ್ನು ಒದಗಿಸುವುದು)

ಇ) ಈ ಸಂಸ್ಥೆಗಳಲ್ಲಿ ಮೀಸಲಾತಿ ಪ್ರಮಾಣ ಕಡಿಮೆಯಿದ್ದರೆ ಬ್ಯಾಕ್‌ಲಾಗ್ ಹುದ್ದೆಗಳನ್ನು ತುಂಬಲು ಸರ್ಕಾರದವರು ಪರಿಶೀಲಿಸುತ್ತಿರುವರೇ?

ಈ) ಹಾಗಿದ್ದಲ್ಲಿ ಈವರೆವಿಗೂ ಕೈಗೊಂಡಿರುವ ಕ್ರಮಗಳೇನು?

ಶ್ರೀ ಡಿ. ಮಂಜುನಾಥ್ (ಉನ್ನತ ಶಿಕ್ಷಣ ಸಚಿವರು) :

ಅ) 1) ಅನುದಾನಿತ ತಾಂತ್ರಿಕ ಮಹಾವಿದ್ಯಾಲಯಗಳು - 11

2) ಅನುದಾನಿತ ಪಾಲಿಟೆಕ್ನಿಕ್‌ಗಳು - 8

	ಇಂಜಿನಿಯರಿಂಗ್ ಕಾಲೇಜುಗಳು		ಪಾಲಿಟೆಕ್ನಿಕ್‌ಗಳು	
1) ಪರಿಶಿಷ್ಟ ಜಾತಿ	321	20%	110	14 %
2) ಪರಿಶಿಷ್ಟ ವರ್ಗ	70	4.5%	15	2%

ಆ) ಇಂಜಿನಿಯರಿಂಗ್ ಕಾಲೇಜುಗಳು ಪಾಲಿಟೆಕ್ನಿಕ್‌ಗಳು

ಒಟ್ಟು ಬೋಧಕ 799 545

ಸಿಬ್ಬಂದಿ